# ನವಿಲುಗನ್ನಡಿ

- ಮೈಸೂರು ಅರಮನೆ ಕಲಾವಿದ ವೈ. ಸುಂದರಯ್ಯ ಅವರ ಕಲಾಕೃತಿ ಇರುವ ಅಕ್ಟೋಬರ್ ಸಂಚಿಕೆಯ ಮುಖಪುಟ ಮುದನೀಡಿತು. ಗಾಂಧೀಜಿಯ ಅನುವಾದಿತ ಬರಹಗಳು ಸಮಯೋಚಿತ. ಗಾಂಧೀ ಚಿಂತನೆಯ ಅಗತ್ಯವನ್ನು ಸಾರುವ ಸಂಪಾದಕೀಯ ಅರ್ಥಪೂರ್ಣ.

**ಬಿ.ಆರ್. ಅಣ್ಣಾಸಾಗರ, ಸೇಡಂ**
**ಗುರುನಾಥ ಸುತಾರ, ಹುಲ್ಯಾಳ**

- ಬಿ.ಎಲ್. ವೇಣು ಸಂದರ್ಶನ (ಸಾಹಿತ್ಯ ನಾವೆಯೊಳಗೆ ಸಿನಿಮಾ ಹರಿಗೋಲು) ಆಪ್ತವಾಗಿದೆ. ವೇಣು ಪ್ರಾಮಾಣಿಕವಾಗಿ ತಮ್ಮ ಅಂತರಂಗವನ್ನು ಬಿಚ್ಚಿಟ್ಟಿದ್ದಾರೆ.

**ಚನ್ನಬಸವ ಪುತ್ತೂರು, ಚಿತ್ರದುರ್ಗ**

- 'ದೊಂಕಾಚಿ ಮೇಷ್ಟ್ರ ಶಾಂತಿ–ಕ್ರಾಂತಿ' (ರಾಜಕುಮಾರ ಕುಲಕರ್ಣಿ) ವಿಭಿನ್ನ ಕತೆ. ನಮ್ಮಲ್ಲಿನ ವೈಚಾರಿಕ ಕ್ರಾಂತಿಗೆ ಹೇಗೆ ಹಿನ್ನಡೆಯಾಯಿತು ಎಂಬುದನ್ನು ಕತೆಗಾರರು ಮಾರ್ಮಿಕವಾಗಿ ವಿವರಿಸಿದ್ದಾರೆ.


**ಬಿ.ಜಿ. ಕುಲಕರ್ಣಿ, ಚಿಕ್ಕೋಡಿ**
**ಜಿ.ಎನ್. ಪ್ರತಿಭಾ, ಶಿವಮೊಗ್ಗ**

- 'ಬೀಗ–ಬೀಗದ ಕೈ' ಕತೆ (ಎಸ್. ಶೇಷಾದ್ರಿ ಕಿನಾರ) ಗಮನ ಸೆಳೆಯಿತು. ಕತೆ ಸಾಂಪ್ರದಾಯಿಕ ಶೈಲಿಯಲ್ಲಿರದೆ ಅಮೂರ್ತವಾಗಿದೆ. ಲೇಖಕರ ಕತೆ ಕಟ್ಟುವ ರೀತಿ ಅನನ್ಯ.

**ಎಸ್.ಜಿ. ನರಸಿಂಹ ಮೂರ್ತಿ, ಬೆಂಗಳೂರು**

- ಸುಧಾ ಆಡುಕಳ ಮತ್ತು ರೂಪ ಹಾಸನ ಅವರ ಸ್ತ್ರೀ ಸಂವೇದನೆಯ ಕವಿತೆಗಳು ಚೆನ್ನಾಗಿವೆ.

**ಜಿ.ಎಸ್. ಚಂದ್ರನಾಥ, ನೀಲಾನಹಳ್ಳಿ**




- ಇಂದಿನ ಟೀವಿ ನಿರೂಪಕರ ಭಾಷೆ, ಭಾವ, ಅವರ ತವಕ ತಲ್ಲಣಗಳನ್ನು ನಟರಾಜ್ ಹುಳಿಯಾರ್ ಅವರು ತಮ್ಮ 'ಒಂದು ಭೋಟಾ ಬ್ರೇಕ್ ನಂತರ' ನೀಳ್ಗತೆಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

**ರವಿ ಮುನವಳ್ಳಿ**

- ನೀಳ್ಗತೆಯ ಮಲ್ಲಿಕಾ, ರಂಜಿತಾ ತರಹ ನಾವೂ ಆಗುತ್ತಿದ್ದೇವೇನೊ ಎಂದು ಅನಿಸಿತು. ರಮೇಶನಂತೆ ಎಲ್ಲದಕ್ಕೂ 'ಭೋಟಾ ಬ್ರೇಕ್' ತೆಗೆದುಕೊಂಡು ಮತ್ತೆ 'ರೀಜುವನೇಟ್' ಆಗಬೇಕು

**ಡಾ. ವತ್ಸಲಾ, ಹಾರೋಹಳ್ಳಿ**

- 'ಅಂಗೈಯಲ್ಲಿ ಅರಮನೆ', 'ಬುತ್ತಿ ಚಿಗುರು' ಹಾಗೂ 'ನಿಚ್ಚಂ ಪೊಸತು' ಅಂಕಣಗಳನ್ನು ಓದಲು ಪ್ರತಿತಿಂಗಳು 'ಮಯೂರ'ದ ದಾರಿ ಕಾಯುತ್ತೇನೆ.

**ಸುಶೀಲಾ ರಾವ್, ಉಡುಪಿ**

- ಅನುಪಮಾ ಪ್ರಸಾದ್ ಅವರ 'ಮೊಲ್ಲೆ ಹೂ ಮಾದೇವಿ ಮೀಮಾಂಸೆ' ಕತೆ ನಾನು ಇತ್ತೀಚೆಗೆ ಓದಿದ ಉತ್ತಮ ಕತೆ.

**ಚಂದನ, ಹೊನ್ನಾಳಿ**